Sri B. RACHAIAH.—The direction given by the High Court was that the Divisional Commissioner, Bangalore Division, should enquire into this matter and find out whether these resignations are genuine or otherwise.

Sri H. SIDDAVEERAPPA.—In which case, the answer given to (*d*) is not correct. Did the High Court confine itself only to this or is it not germane how that forgery started? As the Hon'ble Member Sri Sri kantaiah said, there are two offences here: One is committing forgery and the other is to use the forged letter and then take action on it.

Sri B. RACHAIAH.—It has not been found out who has forged the letter.

ಶ್ರೀ ಹೆಚ್. ಪಟ್ಟಣ್ಣ.—ಮಂತ್ರಿಗಳು ಇಲ್ಲಿ ಉತ್ತರ ಕೊಡುತ್ತಾ ಇಲ್ಲಿನ ತಹಶೀಲ್ದಾರರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದರು. ಇವರನ್ನು ಸಸ್ಪೆಂಡ್ ಮಾಡಿರತಕ್ಕದ್ದು ಆಹಾರ ಪದಾರ್ಥಗಳನ್ನು ದುರ್ವ್ಯಯ ಮಾಡಿದುದಕ್ಕೆ ಮತ್ತು ಬೇರೆ ಇತರ ವ್ಯವಹಾರಗಳಿಗಾಗಿಯೂ ಅವರನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಮಾಡಿರುವುದು ಈ ಕಾರಣಕ್ಕಾಗಿಯೇ ಅಲ್ಲ. ಇಲ್ಲಿ ನಾನು ಹೇಳಿದಂತೆ ವಾಸುದೇವರಾವ್ ಹಾಗೂ ಬನಪ್ಪ ಇವರು 15 ದಿನಕ್ಕೆ ಮುಂಚಿತವಾಗಿಯೇ ರಾಜೀನಾಮೆ ಪತ್ರ ಬರುತ್ತದೆ. ಇದನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ತೋರಿಸಿ ಬೇಕು ಎಂದು ಹೇಳಿದ್ದರೂ ಇದರಲ್ಲಿ ತಹಶೀಲ್ದಾರರ ಕೈವಾಡವೇ ಜಾಸ್ತಿಯಾಗಿದೆ ಎಂದು ತಿಳಿದಿದ್ದರೂ ಸರ್ಕಾರ ಏತಕ್ಕಾಗಿ ಈ ತಹಶೀಲ್ದಾರರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಬಂದಿರುವ ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಇದರಲ್ಲಿ ತಪ್ಪು ಮಾಡಿರುವವರು ಯಾರು ಎನ್ನುವುದನ್ನು ಕಂಡುಹಿಡಿಯಲು ಇದನ್ನು ಪೋಲೀಸಿಗೆ ರೆಫರ್ ಮಾಡಿದೆ ಎಂದು ಹೇಳಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ಈಗ ಡಿವಿಜನಲ್ ಕಮೀಷನರ ಎನ್‌ಕ್ವೈರಿ ವರದಿಯಿದೆ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದೆ?

Sri B RACHAIAH.—The Offieer has been kept under suspension and I have referred the matter to the Police. I need not learn anything from the Hon'ble member as to how to run the administration.

Widening of B.H. Road

541. Sri V. L. SHIVAPPA (Tiptur).—

Will the Minister for Public Works be pleased to state :—

(*a*) whether Government are aware that the bridge situated at 5th furlong, 77th mile of B. H. road is too narrow for safe transport ;

(*b*) whether they have received representations to widen the aforesaid road ;

(*c*) if so, the steps they have taken to widen the road ?

A.—Sri VEERENDRA PATIL (Minister for Public Works).—

(*a*) No.
(*b*) Yes.
(*c*) This will be examined subject to availability of funds.

ಶ್ರೀ ವಿ. ಎಲ್. ಶಿವಪ್ಪ.—ಈ ರಸ್ತೆಯನ್ನು ಅಗಲಗೊಳಿಸಬೇಕೆಂದು ಮನವಿಗಳು ಬಂದಿವೆಯೆಂದು ಉತ್ತರ ಕೊಡಲಾಗಿದೆ. ಹಾಗಿದ್ದಮೇಲೆ ಇದರ ಬಗ್ಗೆ ಕ್ರಮ ಕೈಕೊಂಡಿರುವುದೇನು?

† ಶ್ರೀ ವೀರೇಂದ್ರ ಪಾಟೀಲ್.—ಮನವಿಗಳು ಬೇಕಾದಷ್ಟು ಬರುತ್ತವೆ, ಬಂದ ಕೂಡಲೆ ಮಂಜೂರು ಮಾಡುವಷ್ಟು ಶಕ್ತಿಯಿಲ್ಲ. ಈಗಾಗಲೆ ಒಂದು ಸೇತುವೆ ಇದೆ. ಅದು 18 ಅಡಿ ಅಗಲವಾಗಿದೆ. ಅದು ಬಹಳ ನ್ಯಾರೋ ಎಂದು ಹೇಳುವುದಕ್ಕಾಗುವುದಿಲ್ಲ. 21 ಅಡಿ ಅಗಲದ ಸೇತುವೆ ಕಟ್ಟಲು ಸುಮಾರು 2 ಲಕ್ಷ ರೂಪಾಯಿ ಬೇಕು. ಈಗ ನಮ್ಮಕ್ಕೆ ಕೆಲಸ ನಡೆಯುತ್ತಿದೆ. ಮುಂದೆ ಸ್ಥಿತಿಗತಿ ಉತ್ತಮವಾದರೆ ಇನ್ನೊಂದು ಸೇತುವೆ ಕಟ್ಟುವ ವಿಚಾರವನ್ನು ಯೋಚನೆ ಮಾಡಬಹುದು.

ಶ್ರೀ ಜಿ. ದುಗ್ಗಪ್ಪ.—ಇದು ರಾಷ್ಟ್ರೀಯ ಹೆದ್ದಾರಿ, ಈ ರಸ್ತೆಯಲ್ಲಿರುವುದನ್ನು ಅಗಲ ಮಾಡುವುದಕ್ಕೆ ಅವಕಾಶವಿದೆ. ಆದರ ಪ್ರಕಾರ ಏಕೆ ಸೇತುವೆ ಅಗಲ ಮಾಡಬಾರದು?

ಶ್ರೀ ವೀರೇಂದ್ರ ಪಾಟೀಲ್.—ಇದು ಸ್ಟೇಟ್ ಹೈವೇ ಅಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇದು ಮಿನರಲ್ಸ್ ಸಾಗಿಸುವ ರಸ್ತೆ. ಮಿನರಲ್ಸ್ ಸಾಗಿಸುವ ರಸ್ತೆಗಳಲ್ಲಿರುವ ಸೇತುವೆಗಳನ್ನು ಎಲ್ಲವನ್ನೂ ಅಗಲಮಾಡಿ ಇವೆಯಂದನ್ನು ಗಮನಿಸುವುದಕ್ಕೆ ಕಾರಣವೇನು? I do not know why this particular bridge is left over.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಿ ಸೇತುವೆಗಳನ್ನು ಅಗಲಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಈ ಸೇತುವೆ ಐರನ್ ಓರ್ ಸಾಗಿಸುವ ರಸ್ತೆ ಎಲ್ಲಿದೆಯೆಂಬುದೂ ಗೊತ್ತಿಲ್ಲ.

ಉಪಾಧ್ಯಕ್ಷರು.—ಪ್ರಶ್ನೆ 542 ಮತ್ತು 543.

ಸದಸ್ಯರು ಹಾಜರಿರಲಿಲ್ಲ. ಈಗ ಪ್ರಶ್ನೆ ನಂ. 544.

Repaire to Settikerai tank

544. Sri R. NAGAN GOUDA (Hospet).—

Will the Minister for Public Works be pleased to state:—

(*a*) whether they have included in the "Bellarijillai Vihangama Nota" Proposals to take up repairs to the Settikerai tank near Papinayakanahalli Village in Hospet Taluk;

(*b*) the estimate for this work;

(*c*) the progress made on this work so far;

(*d*) when the work is expected to be completed?

A.— Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) Rs. 3.40 lakhs.

(*c*) As this is located in mining area, the work has been dropped.

(*d*) Does not arise in reply to clause (*c*) above.

Sri R. NAGAN GOUDA.—In answer to 'C, it is stated that as this is located in mining area, the work has been dropped. In my opinion, this tank does not interfere in any way with the mining work. This was

† Indicates that the speeches or remarks have not been revised by the member concerned.